ಓ ಎಸ್ ನಂ. 68/2024

ಪಿ.ಡಬ್ಲು- 1

ಚಂದ್ರಕಾಂತ ತಂದೆಃ ದತ್ತಾತ್ರೇಯ ಕುಲಕರ್ಣಿ

**ಇಂದು ದಿನಾಂಕಃ04-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎನ್ ಪಿ ವಕೀಲರಿಂದ.**

ಈ ದಾವೆ ಹಾಕುವ ಮೊದಲು ನಾನು ನನ್ನ ಸಹೋದರಿಯರನ್ನು ಬೇಟಿಯಾಗಿರುವುದಿಲ್ಲ. 2022 ರಲ್ಲಿ ಮಾತುಕತೆ ಆಗಿ ನನ್ನ 1ನೇ ಪ್ರತಿವಾದಿ ವಾದಿಗಳಾದ ನಮಗೆ ದಾವಾ ಆಸ್ತಿಯಲ್ಲಿ ಅರ್ಧ ಭಾಗ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಕುರಿತು ಯಾವುದೇ ದಾಖಲೆ ಆಗಿರುವುದಿಲ್ಲ. ಸಾಕ್ಷಿಗೆ ಒಂದು ವಿಭಾಗ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ಸಹಿ ಇರುವುದಾಗಿ ನೋಡಿ ಗುರುತಿಸಿರುತ್ತಾರೆ. ವಾದಿ ಪರ ವಕೀಲರು ಸದರಿ ದಾಖಲೆ ನೊಂದಣಿ ಆಗಿರುವುದಿಲ್ಲ ಮತ್ತು ಅವಶ್ಯಕ ಸ್ಟಾಂಪಡ್ಯುಟಿ ತುಂಬಿರುವುದಿಲ್ಲ ಎಂದು ಅದನ್ನು ಗುರುತಿಸಲು ತಕರಾರು ಮಾಡಿರುತ್ತಾರೆ. ಅವರ ತಕರಾರಿಗೆ ಒಳಪಟ್ಟು ಕೇವಲ ದಾಖಲೆಯನ್ನು ಗುರುತಿಸುವ ಸಲುವಾಗಿ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ತಮ್ಮ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ನಿಡಿ-1 ವಿಭಾಗ ಪತ್ರದಂತೆ ವಾದಿಯರಾದ ನಮ್ಮ ಹೆಸರಲ್ಲಿ ದಾವಾ ಆಸ್ತಿಯಲ್ಲಿ ಅರ್ಧ ಪಾಲು ಪಂಚಾಯತಿಯಲ್ಲಿ

ಹೆಸರು ಬಂದಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಅರ್ಧ ಪಾಲಿನ ಜಾಗೆಯನ್ನು ನಾವು ಬಾಡಿಗೆ ಕೂಡಾ ನೀಡಿರುತ್ತೇವೆ ಎಂದರೆ ಸರಿಯಲ್ಲ.

2. 1ನೇ ಪ್ರತಿವಾದಿ ನಾನು ತೊಂದರೆ ಕೊಡುವ ಉದ್ದೇಶದಿಂದ ಒಂದು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬೆಲೆ ಹೆಚ್ಚಿಗೆ ಆಗಿರುವುದರಿಂದ ನಾನು ಒಂದು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿಡಿ-1 ವಿಭಾಗ ಪತ್ರ ಸುಳ್ಳು ಇದೆ ಎನ್ನುತ್ತಾರೆ. ದಾವಾ ಆಸ್ತಿಯ ಬೆಲೆ ಈಗ ಎಷ್ಟು ಇರುತ್ತದೆ ಎಂದರೆ ಈಗ ನನಗೆ ಗೊತ್ತಿಲ್ಲ. ನಾನು ಒಂದು ಸುಳ್ಳು ದಾವೆಯನ್ನು ಹಾಕಿ ಒಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.